# ಹೋಮ್ ಕ್ವಾರಂಟೈನ್

■ **ಶಂಕರ್ ಬಿಲ್ಲೇಮನೆ**
ಕಲೆ: ರಾಮಕೃಷ್ಣ ಸಿದ್ರಪಾಲ

ಬೆಳಗ್ಗಿನ 6 ಗಂಟೆ. ಆಟೋರಿಕ್ಷಾ, ಬಸ್ಸು ಬೈಕುಗಳ ಸದ್ದಿಲ್ಲ. ಬದಲಾಗಿ ಕೋಗಿಲೆ ಕೂಗುತ್ತಿದೆ. ಎಂದೂ ಕೇಳಿಲ್ಲದ ಯಾವುದೋ ಹಕ್ಕಿಯ ಚಿಲಿಪಿಲಿ. ರಂಗನಾಥ ನಿದ್ದೆಯಿಂದ ಎದ್ದ. ಕೈಗೆ ಸ್ಯಾನಿಟೈಸರ್ ಸುರಿದುಕೊಂಡು ಎರಡೂ ಕೈಗಳನ್ನು ಚೆನ್ನಾಗಿ ಉಜ್ಜಿಕೊಂಡ. ಸ್ಯಾನಿಟೈಸರ್ ಬಾಟಲ್ ಅನ್ನು ಅದರ ಜಾಗದಲ್ಲಿ ಇಟ್ಟ. ತನ್ನ ಇಷ್ಟದ ಖಾದೀ ಕರ್ಚೀಫನ್ನೇ ಮಾಸ್ಕ್‌ನಂತೆ ಮಡಿಚಿ ಮೂಗು ಬಾಯಿಗೆ ಸುತ್ತಿಕೊಂಡ. ಮನೆಯಿಂದ ಹೊರಟ. ಗೇಟ್ ಬಳಿ ಬಂದ ಕೂಡಲೇ 'ಇದನ್ನ ಹೇಗಪ್ಪಾ ತೆಗೀಲಿ' ಎಂದು ಕ್ಷಣ ಯೋಚಿಸಿದ. ತನ್ನ ಎಡಗೈ ತೋರುಬೆರಳಿನಿಂದ ಗೇಟಿನ ಚಿಲಕವನ್ನು ಮೇಲೆತ್ತಿ ಪಕ್ಕಕ್ಕೆ ಸರಿಸಿದ. ಎಡಗಾಲಿನಿಂದ ಗೇಟನ್ನು ತಳ್ಳಿದ. ವಾಪಸ್ಸು ಬಂದಾಗ ಮತ್ತೆ ಚಿಲಕ ತೆಗೆಯಲು, ಗೇಟಿನ ಬಾಗಿಲು ತೆಗೆಯಲು ಈ ಸರ್ಕಸ್ ಮಾಡೋದು ಬೇಡ ಅಂತ ಗೇಟಿಗೆ ಚಿಲಕ ಹಾಕದೆ ಹಾಗೇ ನಡೆದ. ಬೀದಿಗೆ ಬಂದ. ಗೇಟಿನ ಮೇಲೆ ಅದರ ಚಿಲಕದ ಮೇಲೆ ಕೂತಿರಬಹುದಾಗಿದ್ದ ಕೊರೊನಾ ಕೀಟವನ್ನು ಗೇಟಿನಲ್ಲೇ ಕಟ್ಟಿಹಾಕಿದ ಕಾಲ್ಪನಿಕ ನೆಮ್ಮದಿ ಅವನಿಗಾಯಿತು. ಸ್ವಲ್ಪ ದೂರ ನಡೆದು ಅತ್ತಿತ್ತ ಕಣ್ಣಾಡಿಸಿದಾಗ ಕಂಡಿದ್ದು ಕೆಲವೇ ಕೆಲವು ಮಾಸ್ಕ್‌ಧಾರಿ ಮಾನವರು. ಖಾಲಿಬಿದ್ದ ರಸ್ತೆಗಳು ಮತ್ತು ಗಿಡಮರಗಳು ಕೂಡ ಎಂದಿನ ತಮ್ಮ ಪರಿಚಿತ ಮನುಷ್ಯರ ಒಡನಾಟ ತಪ್ಪಿ, ಯಾರೋ ಅನ್ಯಗ್ರಹದವರು ಬಂದು ಓಡಾಡುತ್ತಿದ್ದಾರೆ ಎಂದು ಭಾವಿಸಿ ಕಂಗಾಲಾದಂತೆ ಕಂಡು ಬಂತು. ತನ್ನ ಕಲ್ಪನೆಗೆ ತಾನೇ ನಸುನಕ್ಕು ಮುನ್ನಡೆದ.

ಮಾಸ್ಕ್ ಹಾಕಿಕೊಳ್ಳದ ಬಾಯಿಯಿಂದ 'ಹೇಳಿ ಸಾರ್' ಎಂದು ಕೇಳಿದ ಹಾಲಿನ ಬೂತಿನವನಿಗೆ 'ಒಂದು ಲೀಟರ್ ಗ್ರೀನ್' ಅಂತ ಹೇಳಿದ. ಗ್ಲೌಸನ್ನೂ ಹಾಕಿಕೊಳ್ಳದ ಇವನು ಕೈಗೆ ಸ್ಯಾನಿಟೈಸರ್ ಹಾಕಿಕೊಂಡಿದ್ದಾನೆ ಎನ್ನುವ ಗ್ಯಾರಂಟಿ ಏನು? ಎಂದು ಮನಸ್ಸಿಗೆ ಬಂತು, ಗಾಬರಿಯಾದ. ಅವನು ಕೊಡುವ ಮೊದಲೇ, ತಾನೇ ಹಾಲಿನ ಪ್ಯಾಕೆಟ್‌ಗಳನ್ನು ಎತ್ತಿಕೊಂಡ. ದುಡ್ಡು ಕೊಟ್ಟು ಮನೆಯತ್ತ ನಡೆದ.

ಗೇಟಿನ ಬಳಿ ಬಂದವನಿಗೆ ಆಶ್ಚರ್ಯ. ಗೇಟಿನ ಚಿಲಕ ಹಾಕಿದೆ. ಜೊತೆಗೆ ಅದಕ್ಕೊಂದು ಬಿಳಿ ಚೀಟಿ ಸಿಕ್ಕಿಸಿದೆ. ಇದೇನು ಗ್ರಹಚಾರ ಅಂದುಕೊಂಡ. ವಿದ್ಯುತ್, ನೀರು, ಬಿಲ್ಲುಗಳನ್ನು ಆನ್‌ಲೈನ್ ಕಟ್ಟಿಯಾಗಿದೆ. ಬೇರೆ ಯಾವ ಬಿಲ್ಲೂ ಬಾಕಿ ಇಲ್ಲ. ಯಾವುದೇ ಇನ್ವಿಟೇಷನ್ ನಂತೆಯೂ ಕಾಣಿಸ್ತಿಲ್ಲ. ಅಥವಾ ಯಾವುದಾದರೂ ಪೆನಾಲ್ಟಿ ನೋಟಿಸ್ ಇರಬಹುದಾ ಎಂದು ಯೋಚಿಸಿದ. ರಿಟೈರ್ ಆಗೋಕ್ಕೆ ಎರಡು ವರ್ಷ ಮುಂಚೆನೇ ಗಾಡಿ ಓಡಿಸುವುದಕ್ಕೆ ನಿವೃತ್ತಿ ಕೊಟ್ಟಾಗಿತ್ತು. ಹಾಗಾಗಿ ಟ್ರಾಫಿಕ್ ವಯೊಲೇಷನ್ ಪ್ರಶ್ನೆ ಇಲ್ಲ. ಹಾಗಾದ್ರೆ ಇದೇನಿದು? ಈ ಬಿಳೀ ಚೀಟಿ?. ಯೋಚನೆಗೆ ಬಿದ್ದ. ಮನೆಗೆ ಹೋಗಬೇಕು ಅಂದರೆ ಗೇಟು ತೆಗೆಯಲೇ ಬೇಕು. ಗೇಟು ತೆಗೆಯಬೇಕು ಅಂದರೆ ಈ ಚೀಟಿ ತೆಗೆದು ಹಾಕಲೇ ಬೇಕು. ಬೇರೆ ದಾರಿ ಇಲ್ಲ. ಸರಿ ಈ ಚೀಟಿ ಎತ್ತಿ ಬಿಸಾಕಿ ಮನೆಯೊಳಗೆ ಹೋದ ಮೇಲೆ ಹೋಗಿ ಸ್ನಾನ ಮಾಡಿಬಿಟ್ಟರಾಯ್ತು ಎಂದುಕೊಂಡು ಚೀಟಿಗೆ ಕೈ ಹಾಕಿದ. ಬಿಸುಡುವ ಮುನ್ನ ಒಮ್ಮೆ ಚೀಟಿ ನೋಡಿದ.

ಅದು ಶಿವರಾಮು ಎನ್ನುವ ರೋಗಿಯ ಪ್ರಿಸ್ಕ್ರಿಪ್ಷನ್.

ಇವನ್ಯಾವ ಶಿವರಾಮು? ಇವನ ಪ್ರಿಸ್ಕ್ರಿಪ್ಷನ್ ನನ್ನ ಮನೆಯ ಗೇಟಿನಲ್ಲೇಕೆ ಎಂದು ಯೋಚಿಸಿದ. ಮರುಕ್ಷಣವೇ ಯಾರಾದ್ರೆ ನನಗೇನು? ಅವನಿಗೆ ಅವನ ಮೇಲೆ ಇಲ್ಲದ ಚಿಂತೆ ನನಗ್ಯಾಕೆ ಎಂದುಕೊಂಡು ಅದನ್ನು ಎಸೆಯಲು ನೋಡಿದ. ನಿಲ್ಲಿಸಿ ಮತ್ತೊಮ್ಮೆ ಯೋಚಿಸಿದ. ಯಾರಾದರೂ ಔಷಧಿ ಕೊಳ್ಳಲು ದುಡ್ಡಿಲ್ಲದೆ, ದುಡ್ಡು ಕೇಳಲು ಹೀಗೆ ಮಾಡಿದ್ದಾರಾ? ಎಂದು ಪ್ರಶ್ನಿಸಿಕೊಂಡ. ಹಾಗಿದ್ದರೆ ಎದಿರು ನಿಂತು ಪ್ರಿಸ್ಕ್ರಿಪ್ಷನ್ ತೋರಿಸಿ ಕೇಳುತ್ತಿದ್ದರು. ಹೀಗೆ ಗೇಟಿಗೆ ಯಾಕೆ ಸಿಕ್ಕಿಸಿ ಹೋಗುತ್ತಿದ್ದರು ಎಂದು ಸಮಜಾಯಿಷಿ ಹೊಳೆಯಿತು. ಯೋಚಿಸಿದ ಯೋಚಿಸಿದ ಯೋಚಿಸಿದ. ಏನೂ ತೋಚಲಿಲ್ಲ. ಮತ್ತೊಮ್ಮೆ ಚೀಟಿಯತ್ತ ನೋಡಿದ. ಈಗ ಅವನ ಗಮನ ಪ್ರಿಸ್ಕ್ರಿಪ್ಷನ್‌ನಲ್ಲಿದ್ದ ವಯಸ್ಸಿನತ್ತ ಹರಿಯಿತು.

ಶಿವರಾಮು ಏಜ್ಡ್ 74 ಇಯರ್ಸ್.

ಛೇ ಯಾರೋ 74 ವರ್ಷದ ಮುದುಕ. ಸರಿ, ಆದರೆ ಇಲ್ಲಿ, ನನ್ನ ಮನೆ ಗೇಟಿನಲ್ಲಿ ಯಾಕೆ ಅವನ ಪ್ರಿಸ್ಕ್ರಿಪ್ಷನ್? ಕಳೆದುಕೊಂಡು ಬಿಟ್ಟಿದ್ದಾನಾ? ಅಥವಾ ಬೇಕೆಂದೇ ಇಲ್ಲಿ ಇಟ್ಟಿದ್ದಾನಾ? ಯೋಚಿಸುತ್ತಿದ್ದವನಿಗೆ ಟ್ರಿನ್ ಟ್ರಿನ್ ಎನ್ನುವ ಲ್ಯಾಂಡ್ ಲೈನ್ ಫೋನಿನ ಸದ್ದು ಕರೆಯಿತು. ಮನೆಯಿಂದ ಹೋಗುವಾಗ ತಲೆಯಲ್ಲಿ ಕೊರೊನಾ ಹೊತ್ತಿದ್ದವನು ಈಗ ಶಿವರಾಮುವನ್ನು ಹೊತ್ತು ಮನೆಯೊಳಗೆ ಬಂದ.

'ಯಾಕೆ ಇಷ್ಟು ಹೊತ್ತು?'

ಕೇಳಿದ್ದಳು, ಅಮೆರಿಕದ ಬೋಸ್ಟನ್‌ನಿಂದ ಕಾಲ್ ಮಾಡಿದ್ದ ಮಗಳು ಸಿರಿ. ಪ್ರೀತಿ ಕಾಳಜಿ ಅಧಿಕಾರ ಎಲ್ಲವೂ ತುಂಬಿದ ದನಿಯಲ್ಲಿ.

'ಲ್ಯಾಂಡ್‌ಲೈನಿಗೆ ಯಾಕೆ ಕಾಲ್ ಮಾಡ್ತೀಯಾ? ಗೇಟಿನವರೆಗೂ ಸದ್ದು ಕೇಳುತ್ತೇ. ನಾನು ಯಾರೋ ಅಂತ ಗಾಬರಿಯಾಗಿ ಓಡಿಕೊಂಡು ಬಂದೆ'.

'ಲ್ಯಾಂಡ್ ಲೈನಿಗೆ ಕಾಲ್ ಮಾಡೋದು ಯಾಕೆ ಅಂದ್ರೆ? ನೀನು ಮನೆಲೆ ಇದ್ದೀಯಾ ಇಲ್ವಾ ಅಂತ ಕಂಡು ಹಿಡಿಯೋಕೆ?.. ಹಾಲು ತರೋಕೆ ಯಾಕೆ ಇಷ್ಟು ಹೊತ್ತು? ಗೇಟಲ್ಲೆ ಏನು ಮಾಡ್ತಾ ಇದ್ದೇ?'

'ನೀನು ಯಾಕಮ್ಮ ಇನ್ನೂ ಎದ್ದಿದ್ದೀಯಾ? ಅಲ್ಲಿ ಈಗ ಎಷ್ಟು ಗಂಟೆ? 12 ಆಗಿರಬೇಕಲ್ವಾ? ಮಲಗಿಕೋ ..ಆರೋಗ್ಯ ಕೆಡತ್ತೆ.'

'ಅಪ್ಪ, ಈಗಿನ್ನೂ 9.30, ಹೀಗೆಲ್ಲಾ ಮಾತಾಡಿ ನನ್ನನ್ನ ಸುಮ್ಮನಾಗಿಸೋಕ್ಕೇ ನೋಡಬೇಡಿ. ಹಾಲು ತಂದ್ರಾ? ಚಪ್ಪಲಿ ಆಚೆನೇ ಬಿಟ್ರಾ? ಮನೆ ಒಳಗೆ ಬಂದ ಮೇಲೆ ಸೋಪ್ ಹಾಕಿ ಚೆನಾಗಿ ಕೈ ತೊಳೆದುಕೊಂಡ್ರಾ?'

'ಆಂ..ಆಂ ಎಲ್ಲಾ ಆಯ್ತು ಎಲ್ಲಾ ಆಯ್ತು'

'ಸರಿ ಈಗ ಮನೇಲಿ ಇದ್ದೀರಲ್ಲ... ವಿಡಿಯೊ ಕಾಲ್ ಮಾಡ್ತೀನಿ ಎಂದು ಹೇಳಿ ಕಾಲ್ ಕಟ್ ಮಾಡಿದಳು.

ರಂಗನಾಥ ರಿಸೀವರ್ ಇಡುವಷ್ಟರಲ್ಲಿ ಮೊಬೈಲ್ ರಿಂಗಾಯಿತು. ಮೊಬೈಲ್‌ನ ಒಂದು ಮೂಲೆಯಿಂದಲೇ 'ಹಾಯ್' ಎಂದಳು ಸಿರಿ. ಅವಳ ಕಣ್ಣುಗಳಲ್ಲಿ ಆಗಲೇ ನಿದ್ದೆಯ ಸೂಚನೆ. ರಂಗನಾಥ ಅದನ್ನು ಗಮನಿಸಿದ. 'ಮಲಗು' ಅಂತ ಪುನಃ ಹೇಳಿದರೆ ರೇಗ್ತಾಳೆ ಅಂತ ಗೊತ್ತು. ಅನಿವಾರ್ಯ ತಾನೂ 'ಹಾಯ್' ಎಂದ.

'ಸೋ.. ಹಾಲು ಕಾಯಿಸಿಕೊಂಡು, ಕಾಫಿ ಮಾಡಿಕೊಂಡು ಕೂಡಿ, ಆಮೇಲೆ ಸ್ನಾನ ಮಾಡು ಸ್ವಲ್ಪ ಹೊತ್ತು ಮೆಡಿಟೇಷನ್ ಮಾಡು ಅಥವಾ ದೇವರಪೂಜೆ ಮಾಡೋದೆ ನಿನಗೆ ಮೆಡಿಟೇಷನ್ ಅನ್ನೋದಾದ್ರೆ ಅದನ್ನೇ ಮಾಡು. ಒಟ್ಟಿನಲ್ಲಿ 9 ಗಂಟೆ ಒಳಗೆ ಇದೆಲ್ಲಾ ಮಾಡಿ ಮುಗಿಸ್ಕೋ ಬೇಕು. 9 ಗಂಟೆಗೆ ಅನು ಬ್ರೇಕ್‌ಫಾಸ್ಟ್ ಅಂಡ್ ಲಂಚ್ ಎರಡೂ ತಂದು ಕೊಡ್ತಾಳೆ. ಅದನ್ನ ತಗೋ. ನಿನ್ನೆ ಅವಳು ತಂದು ಕೊಟ್ಟಿದ್ದ ಡಬ್ಬಿಗಳನ್ನ ವಾಪಸ್ ಕೊಡು'....ಸಾಗಿಯೇ ಇತ್ತು ಮಗಳ ಆನ್‌ಲೈನ್ ಕಾಳಜಿ.

ಈ ಹಾಳು ಕೊರೊನಾ ಕ್ರಿಮಿಯಿಂದಾಗಿ ಲಾಕ್‌ಡೌನ್ ಅನ್ನೋದು ಶುರುವಾದ ಮೇಲೆ ದಿನ